

# ಸೂಕ್ಷ್ಮ ಎಳೆಗೆ ಕಥನಕೌಶಲದ ಫ್ರೇಮ್

ಧರ್ಮವೆಂಬುದು ಬಡವರ ಪಾಲಿಗೆ ಎಂಥ ಹೊರೆಯಾಗಬಲ್ಲದು ಎಂಬುದನ್ನು ಬಹುಸೂಕ್ಷ್ಮವಾಗಿ ಹೇಳುವ ಕಿರುಚಿತ್ರ 'ಬೇನಾ'. ನೇರವಾಗಿ ಹೇಳಿದ್ದರೆ ವಾಚ್ಯವಾಗಿ ಬಿಡಬಹುದಾಗಿದ್ದ ಸಂಗತಿಯೊಂದನ್ನು ಉತ್ತಮ ಕಥನ ತಂತ್ರವು ಹೇಗೆ ಧ್ವನಿಪೂರ್ಣವಾಗಿಸುತ್ತದೆ ಎಂಬುದಕ್ಕೆ ಈ ಕಿರುಚಿತ್ರ ಒಂದು ಉದಾಹರಣೆ.

ಬೇನಾ ತನ್ನ ಮಗಳನ್ನು ಕಳುಹಿಸುವ ಶಾಲೆಗೆ ಫೀಸ್ ಕಟ್ಟಬೇಕಾಗಿದೆ. ಫೀಸ್ ಕಟ್ಟದಿದ್ದರೆ ಪರೀಕ್ಷೆಗೆ ಕುಳಿತುಕೊಳ್ಳಲು ಬಿಡುವುದಿಲ್ಲ ಎಂಬುದು ಶಾಲೆಯಲ್ಲಿ ಹೇಳಿದ್ದಾರೆ. 'ಹೇಗಾದರೂ ಮಾಡಿ ನಾನು ಫೀಸ್‌ಗೆ ಹಣ ಹೊಂದಿಸುತ್ತೇನೆ. ನೀನು ಆ ಬಗ್ಗೆ ಯೋಚನೆ ಮಾಡಬೇಡ. ಚೆನ್ನಾಗಿ ಓದಿಕೊ' ಎಂದು ಮಗಳಿಗೆ ಅವಳು ಭರವಸೆಯನ್ನು ಕೊಟ್ಟಿದ್ದಾಳೆ. ಅವಳಿಗಿರುವ ಒಂದೇ ಒಂದು ನಂಬಿಕೆ ಏನೆಂದರೆ ತಾನು ಮನೆಗೆಲಸಕ್ಕೆ ಹೋಗುತ್ತಿರುವ ಮನೆಯಲ್ಲಿ ಕೇಳಿದರೆ ಒಂದಿಷ್ಟು ಅಡ್ವಾನ್ಸ್ ಹಣ ಕೊಟ್ಟೇ ಕೊಡುತ್ತಾರೆ ಎಂಬುದು.

ಅದೇ ನಂಬಿಕೆಯ ಮೇಲೆ ಆ ಮನೆಗೆ ಹೋದರೆ ಅವರೆಲ್ಲ ಮಗಳ ಮದುವೆಯ ಮಾತುಕತೆಯಲ್ಲಿದ್ದಾರೆ. ಮನೆಯ ಯಜಮಾನಿ 'ತಾನು ಸಲ್ಮಾನ್ ಖಾನ್‌ನ ಹಾಡಿಗೆ ಡಾನ್ಸ್ ಮಾಡುತ್ತೇನೆ' ಎಂದರೆ ಯಜಮಾನನಿಗೆ ಶಾರುಖ್ ಖಾನ್ ಹಾಡುಗಳ ಮೇಲೆ ಮೋಹ. ಅರಳುಮರುಳಾಗಿ ಕೂತಿರುವ ಮುದಿಯಜ್ಜಿ ದಿಲೀಪ್ ಕುಮಾರ್ ಹೆಸರನ್ನೂ ನೆನಪಿಸಿಕೊಂಡು ಹೇಳುತ್ತಿದ್ದಾಳೆ. ಅವರು ಅವರದೇ ಆಲೋಚನೆಯಲ್ಲಿದ್ದಾಗ ಬೇನಾ ಹೋಗಿ ಮಗಳ ಸ್ಕೂಲ್ ಫೀಸಿಗೆ ಹಣ ಕೇಳುತ್ತಾಳೆ. ಗಂಡ ಹೆಂಡತಿ ಕೊಂಚ ಮಾತಾಡಿಕೊಂಡು ಹಣ ಕೊಡಲು ಒಪ್ಪಿಕೊಳ್ಳುತ್ತಾರೆ. ಬೇನಾ ನೆಮ್ಮದಿಯ ನಿಟ್ಟುಸಿರು ಬಿಡುತ್ತಾಳೆ.

ಹೆಸರು: ಬೇನಾ (ಹಿಂದಿ)
ನಿರ್ದೇಶನ: ವೃಷಾಲಿ ತೆಲಾಂಗ್
ನಿರ್ಮಾಣ: ಪರ್ಝ್ನಾನಾ ಸರೂಪ್
ಛಾಯಾಗ್ರಹಣ: ಜಾನ್ ವಿಲ್ಮೋರ್
ಸಂಗೀತ: ಅಂತರಾ ವೈದ್ಯ
ತಾರಾಗಣ: ಜೂಹಿಯಾನಾ ಅಶನ್; ಅರ್ಚನಾ ಪಟೇಲ್; ಅಬ್ಬಾಸ್ ಸಯ್ಯದ್; ಸ್ವರೂಪಾ

■ ಗೌರಿ

ಅದೇ ದಿನ ಸಂಜೆ ನೋಡಿದರೆ ಮನೆಗೆ ಪೊಲೀಸ್ ಅಧಿಕಾರಿಯೊಬ್ಬ ಬಂದಿದ್ದಾನೆ. ಅವನು ಆ ಮನೆಯ ಕಾರ್ ಡ್ರೈವರ್‌ನನ್ನು ವಿಚಾರಿಸುತ್ತಿದ್ದಾನೆ. ಮನೆಯಲ್ಲಿದ್ದ ಆಭರಣದ ಸೆಟ್ ಕಾಣೆಯಾಗಿದೆ. ಅದರ ಬಗ್ಗೆ ಪೊಲೀಸ್ ಕಂಪ್ಲೇಂಟ್ ಕೊಟ್ಟಾಗ ವಿಚಾರಿಸಲು ಆ ಅಧಿಕಾರಿ ಬಂದಿದ್ದಾನೆ. ಕಾಫಿ ತೆಗೆದುಕೊಂಡು ಹೋಗಿ ಕೊಡುವ ಬೇನಾಳನ್ನೂ ಆ ಪೊಲೀಸ್ ಅಧಿಕಾರಿ ತೀಕ್ಷ್ಣವಾಗಿ ಪ್ರಶ್ನಿಸುತ್ತಾನೆ. ನಿನ್ನ ಬಸ್ ಟಿಕೆಟ್ ಕೊಡು ಎಂದು ಕೇಳುತ್ತಾನೆ. ಅವನ ಒರಟು ಮಾತಿಗೇ ಬೆಚ್ಚುವ ಬೇನಾ, ನಡುಗುತ್ತಲೇ ಬ್ಯಾಗ್‌ನಲ್ಲಿರುವ ಟಿಕೆಟ್ ತೆಗೆಯುತ್ತಾಳೆ. ಅಷ್ಟರಲ್ಲಿ ಅಲ್ಲಿಗೇ ಬರುವ ಪೊಲೀಸ್ ಅವಳ ಬ್ಯಾಗ್ ಅನ್ನು ಸೆಳೆದುಕೊಂಡು ಒಳಗೇನಿದೆಯೋ ನೋಡುತ್ತಾನೆ.

ಮುಂದಿನ ದೃಶ್ಯದಲ್ಲಿಯೇ ಬೇನಾಳನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ. ಅವಳು ಮತ್ತೆ ಸಮುದ್ರದ ದಂಡೆಯ ಮೇಲೆ ಕೂತು ಬೇರೆ ಕೆಲಸಕ್ಕೆ ಫೋನ್‌ನಲ್ಲಿ ಪ್ರಯತ್ನಿಸುತ್ತಾಳೆ. ಫೋನ್‌ನಲ್ಲಿ ತನ್ನ ಹೆಸರು ಬೇನಾ ಶಾ ಎಂದೂ, ಬೇರೆ ಕೆಲಸದವಳು ಬಂದಿದ್ದರಿಂದ ನಾನು ಹಳೆಯ ಮನೆಯ ಕೆಲಸ ಬಿಡಬೇಕಾಯಿತೆಂದೂ ಹೇಳಿಕೊಳ್ಳುತ್ತಿರುತ್ತಾಳೆ. ಅಷ್ಟರಲ್ಲಿ ಅವಳಿಗೆ ಡ್ರೈವರ್‌ನ ಫೋನ್ ಬರುತ್ತದೆ. ಆಭರಣ ಸಿಕ್ಕಿದೆ ಎಂದೂ, ಅದು ಮರೆಗುಳಿ ಅಜ್ಜಿ ವಾಷಿಂಗ್ ಮಷಿನ್‌ಗೆ ಹಾಕಿದ್ದಳೆಂದೂ ಹೇಳುತ್ತಾಳೆ.

ಅಷ್ಟರಲ್ಲಿ ಬೇನಾಳಿಗೆ ಮತ್ತೊಂದು ಫೋನ್ ಬರುತ್ತದೆ. ಈ ಸಲ ಬೇನಾ ತನ್ನನ್ನು ಕೆಲಸದಿಂದ ಕಿತ್ತುಹಾಕಿದ್ದಾರೆ ಎಂಬ ಸತ್ಯವನ್ನೇ ಹೇಳುತ್ತಾಳೆ. ಆದರೂ ಅವರು ಬೇನಾಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಯಾಕೆಂದರೆ ಬೇನಾಳನ್ನು ಕೆಲಸದಿಂದ ಕಿತ್ತುಹಾಕಿದ್ದ ಬಾಬಿಯೇ ಅವಳನ್ನು ಮತ್ತೊಬ್ಬರ ಮನೆಗೆ ಕೆಲಸಕ್ಕೆ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿರುತ್ತಾಳೆ.

ಹಾಗಾದರೆ ಬೇನಾಳನ್ನು ಯಾಕೆ ಅವರು ಕೆಲಸದಿಂದ ತೆಗೆದುಹಾಕಿದ್ದರು? ಮತ್ಯಾಕೆ ಬೇರೆಯವರ ಮನೆಗೆ ಶಿಫಾರಸ್ಸು ಮಾಡಿದರು? ಈ ಪ್ರಶ್ನೆಗೆ ಉತ್ತರವನ್ನು ಕಿರುಚಿತ್ರ ನೋಡಿಯೇ ತಿಳಿದುಕೊಳ್ಳಬೇಕು.

ಒಂದು ಸೂಕ್ಷ್ಮ ಎಳೆಯನ್ನು ಅಷ್ಟೇ ಸೂಕ್ಷ್ಮವಾಗಿ, ಸಸ್ಪೆನ್ಸ್ ಅಂಶವನ್ನೂ ಜೊತೆಗಿಟ್ಟು ಕಟ್ಟಿದ ಈ ಕಿರುಚಿತ್ರ, ತಂತ್ರದ ಕಾರಣಕ್ಕಷ್ಟೇ ಅಲ್ಲದೆ, ನಮ್ಮ ಭಾವಬಿತ್ತಿಯ ಮೇಲೆ ಮೂಡಿಸುವ ಪರಿಣಾಮದ ಕಾರಣಕ್ಕೂ ಗಮನಸೆಳೆಯುತ್ತದೆ.

ಕಿರುಚಿತ್ರ ವೀಕ್ಷಣೆಗೆ
https://bit.ly/3PvXEqG
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.